**M.V.C.No.878/2024** **CW-1**

# ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

| | | |
|---|---|---|
| ಸಾಕ್ಷಿದಾರರ ಹೆಸರು | - | ಕೌಶಿಕ್ |
| ತಂದೆಯ ಹೆಸರು | - | ರುದ್ರಪ್ಪ ಹೆಚ್.ಬಿ |
| ವಯಸ್ಸು | - | 32 ವರ್ಷ |
| ಉದ್ಯೋಗ | - | ವೈದ್ಯಾಧಿಕಾರಿಗಳು, ಮಲ್ಲಿಪಟ್ಟಣ, ಪ್ರಾಥಮಿಕ ಆರೋಗ್ಯ ಕೇಂದ್ರ |
| ವಾಸಸ್ಥಳ | - | ಅರಕಲಗೂಡು |

ಪ್ರಮಾಣೀಕರಿಸಿದ ದಿನಾಂಕಃ **27/02/2026**

ಮುಖ್ಯ ವಿಚಾರಣೆಃ

ನಾನು ಇಂದು ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿಯಲು ಸಮನ್ಸ್ ಬಂದ ಮೇರೆಗೆ ಹಾಜರಾಗಿರುತ್ತೇನೆ.

ನಾನು ಮಲ್ಲಿಪಟ್ಟಣ ಆರೋಗ್ಯ ಕೇಂದ್ರದಲ್ಲಿ ದಿಃ 21-01-2023 ರಿಂದ ಇಲ್ಲಿಯವರೆಗೆ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತಿದ್ದು ನಾನು ನ್ಯಾಯಾಲಯದ ಆದೇಶದಂತೆ ಈ ದಿನ ಮೃತ ಜಯಣ್ಣ ಬಿನ್ ದೊಡ್ಡಯ್ಯ ಇವರ ಅಪಘಾತಕ್ಕೆ ಸಂಬಂಧಿಸಿದ ಅಪಘಾತದ ಸ್ವಯಂ ಧೃಡೀಕೃತ ವಹಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಸಿ.1 ಎಂದು ಗುರುತಿಸಲಾಯಿತು. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ಪೊಲೀಸರಿಗೆ ನೀಡಿದ ವಿಷಯ ಸೂಚಿಯ ಧೃಡೀಕೃತ ವಹಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಸಿ.2 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **2**ನೇ ಎದುರುದಾರರ ಪರ ಶ್ರೀ ಯು ಎಂ ಸಿ ವಕೀಲರಿಂದಃ

1. ಹೊಡೆದಾಟದ ಪ್ರಕರಣಗಳಲ್ಲಿ ಹಾಗೂ ಅಪಘಾತದ ಪ್ರಕರಣಗಳಲ್ಲಿ ಗಾಯಗೊಂಡ ವ್ಯಕ್ತಿಗಳು ಚಿಕಿತ್ಸೆಗಾಗಿ ಬಂದರೆ ಆ ಕುರಿತು ಚಿಕಿತ್ಸೆ ನೀಡಿ ಸಂಬಂಧಪಟ್ಟ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರೆ ಸರಿ. ಗಾಯಾಳು ಜಯಣ್ಣ ರವರು ದಿಃ 25-01-2024 ರಂದು ಸಂಜೆ 07.20 ಗಂಟೆಗೆ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದರು. ಸದರಿ ಜಯಣ್ಣರವರ ಜೊತೆ

ವೆಂಕಟೇಶ ರವರು ಬಂದಿದ್ದರು. ಜಯಣ್ಣರವರು ಆ ವೇಳೆಯಲ್ಲಿ ಅರೆ ಪ್ರಜ್ಞಾವಸ್ತೆಯಲ್ಲಿ ಇದ್ದರು. ಅಪಘಾತದಲ್ಲಿ ಗಾಯಗೊಂಡು ಬಂದಿರುವ ಸಂಧರ್ಭಗಳಲ್ಲಿ MLC ರಿಜಿಸ್ಟರ್ ನಲ್ಲಿ ಆತನ ಹೇಳಿಕೆಗಳನ್ನು ಆತನಿಂದ ಪಡೆದು ನಮೂದಿಸುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಗಾಯಾಳು ಜಯಣ್ಣ ಅರೆ ಪ್ರಜ್ಞಾವಸ್ತೆಯಲ್ಲಿ ಇದ್ದು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಅವರ ಜೊತೆಯಲ್ಲಿ ಹಾಜರಿದ್ದ ವೆಂಕಟೇಶ್ ರವರ ಹೇಳಿಕೆ ಪಡೆದು MLC ವರದಿಯಲ್ಲಿ ನಮೂದಿಸಿರುತ್ತೇನೆ. ವೆಂಕಟೇಶ್ ರವರು ಗಾಯಾಳುವನ್ನು ಕರೆದುಕೊಂಡು ಬಂದು ಆಸ್ಪತ್ರೆಯಲ್ಲಿ ದಾಖಲಿಸಿದ್ದರು. ನಿಸಿ-1 ರ MLC ವರದಿಯಲ್ಲಿ ಅಪಘಾತಪಡಿಸಿದ ವಾಹನ ಯಾವುದು ಎಂಬುದು ಎಂದು ಗೊತ್ತಿಲ್ಲ ಎಂದು ನಮೂದಿಸಲಾಗಿದೆ. ಆ ಕುರಿತು ನನಗೆ ಮಾಹಿತಿಯನ್ನು ವೆಂಕಟೇಶ್ ರವರು ನೀಡಿರುತ್ತಾರೆ. ಜಯಣ್ಣ ರವರನ್ನು ಅಪಘಾತಪಡಿಸಿದ ಯಾವುದು ಎಂದು ಕೇಳಿದಾಗ ಅದಕ್ಕೆ ಅವರು ಉತ್ತರ ನೀಡುವ ಸ್ಥಿತಿಯಲ್ಲಿ ಇರಲಿಲ್ಲ. ಗಾಯಾಳು ಜಯಣ್ಣ ರವರಿಗೆ MLC ನಮೂದಿಸಿರುವಂತೆ ಆಗಿರುವ ಗಾಯಗಳು ಒಬ್ಬ ವ್ಯಕ್ತಿ ಮರದಿಂದ ಅಥವಾ ಎತ್ತರದ ಸ್ಥಳದಿಂದ ಹಾಗೂ ಬೈಕ್ ಚಾಲನೆ ಮಾಡುವ ವೇಳೆಯಲ್ಲಿ ಸ್ವತಃ ಬಿದ್ದರೆ ಆ ರೀತಿ ಗಾಯಗಳು ಸಂಭವಿಸಬಹುದು ಎಂದರೆ ಸರಿ. ಒಬ್ಬ ವ್ಯಕ್ತಿ ಕತ್ತಲೆ ವೇಳೆಯಲ್ಲಿ ನಡೆದುಕೊಂಡು ಹೋಗುವಾಗ ಆಕಸ್ಮಿಕವಾಗಿ ಹಳ್ಳದಲ್ಲಿ ಬಿದ್ದರೆ ಮೇಲೆ ಹೇಳಿದ ಗಾಯಗಳು ಸಂಭವಿಸಬಹುದು ಎಂದರೆ ಸರಿ. ಜಯಣ್ಣರವರು ಎಲ್ಲಿಯೋ ಬಿದ್ದು ಪೆಟ್ಟು ಮಾಡಿಕೊಂಡು ಬಂದಿದ್ದು ಆತನಿಗೆ ರಸ್ತೆ ಅಪಘಾತದಿಂದ ಯಾವುದೇ ಗಾಯ ಆಗದೇ ಇದ್ದರೂ ಸಹ ಆತನಿಗೆ ಸಹಾಯ ಮಾಡಲು MLC ವರದಿಯಲ್ಲಿ ಅಪಘಾತದಿಂದ ಗಾಯ ಸಂಭವಿಸಿದೆ ಎಂದು ಸುಳ್ಳಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಗಾಯಳುವಿನ ಜೊತೆಯಲ್ಲಿ ಬಂದಿದ್ದ ವೆಂಕಟೇಶ್ ರವರು ನೀಡಿದ ಮಾಹಿತಿಯಂತೆ MLC ವರದಿಯಲ್ಲಿ ನಮೂದಿಸಿರುವುದಾಗಿ ನುಡಿಯುತ್ತಾರೆ. ಯಾವ ವಾಹನದಲ್ಲಿ ಗಾಯಾಳು ಜಯಣ್ಣ ರವರನ್ನು ಕರೆದುಕೊಂಡು ಬರಲಾಗಿತ್ತು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. MLC ವರದಿಯನ್ನು ಯಾವುದೇ ಒತ್ತಡಕ್ಕೆ ಒಳಗಾಗಿ ಅಥವಾ ಗೊಂದಲದಿಂದ ಬರೆದಿರುವುದಿಲ್ಲ. ತುರ್ತು ನಿಗಾ ಘಟಕಕ್ಕೆ ಯಾರು ಗಾಯಾಳುವಿನ ಜೊತೆ ಬಂದಿರುತ್ತಾರೋ ಅವರ ಹೇಳಿಕೆಯನ್ನು ಆಧರಿಸಿ MLC ವರದಿಯಲ್ಲಿ ನಮೂದು ಮಾಡುತ್ತೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರೆದು ಪ್ರತ್ಯಕ್ಷದರ್ಶಿ ಯವರ ಹೇಳಿಕೆಯನ್ನು ಆಧರಿಸಿ MLC ವರದಿಯಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಸದರಿ ವೆಂಕಟೇಶ್ ರವರು

ನನಗೆ ಮಾಹಿತಿ ನೀಡುವ ವೇಳೆಯಲ್ಲಿ ಯಾವ ವಾಹನ ಅಪಘಾತಪಡಿಸಿದೇ ಎಂಬ ಬಗ್ಗೆ ಮಾಹಿತಿ ನೀಡಿಲ್ಲ.

<u>ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ ಎನ್ ಕೆ ಬಿ ವಕೀಲರಿಂದಃ</u>

1. ಗಾಯಾಳು ಜಯಣ್ಣರವರ ಜೊತೆ ಬಂದಿದ್ದ ವೆಂಕಟೇಶ್ ರವರು ಗಾಯಾಳು ಜಯಣ್ಣರವರ ಸಂಬಂಧಿಕರೋ ಅಥವಾ ಅವರ ಊರಿನವರೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗಾಯಾಳುವಿನ ಜೊತೆ ಬಂದಿದ್ದವರ ಹೇಳಿಕೆಯನ್ನು ಆಧರಿಸಿ MLC ವರದಿ ತಯಾರಿಸುತ್ತೇನೆ ಎಂದರೆ ಸರಿ. ಅಪಘಾತಕ್ಕೊಳಗಾಗಿ ಸಂಭವಿಸಿದ ಗಾಯಗಳು ಹಾಗೂ ಮರದ ಮೇಲಿನಿಂದ ಅಥವಾ ಸ್ವತಃ ಬಿದ್ದು ಆಗುವ ಗಾಯಗಳ ನಡುವೆ ವ್ಯತ್ಯಾಸ ಇರುತ್ತವೆ ಎಂದರೆ ಕಡಾಖಂಡಿತವಾಗಿ ಯಾವುದರಿಂದ ಗಾಯ ಸಂಭವಿಸಿದೆ ಎಂದು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು